ಜಟ್ಟಿ ನಿರ್ಮಾಣ ಮಾಡುವುದು

266 (477) ಶ್ರೀ ಖಾದರ್ ಯು.ಟಿ. (ಮಂಗಳೂರು):– ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಳ್ಳಾಲದ ಕೋಟೆಪುರದಲ್ಲಿ ಮೀನುಗಾರಿಕೆ ಜಟ್ಟಿ ನಿರ್ಮಿಸುವ ಕಾಮಗಾರಿ ಅತ್ಯಂತ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಸರಕಾರ ಯಾವಾಗ ಪ್ರಾರಂಭಿಸುವುದು; ಇದಕ್ಕಾಗಿ ಎಷ್ಟು ಹಣವನ್ನು ಕಾಯ್ದಿರಿಸಿದೆ (ವಿವರ ಒದಗಿಸುವುದು)?

ಶ್ರೀ ಆನಂದ ವಸಂತ್ ಅಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–

ಅ) ಹೌದು

ಆ) ಉಳ್ಳಾಲದ ಕೋಟೆಪುರದಲ್ಲಿ 35 ಮೀಟರ್ ಉದ್ದ ಮೀನುಗಾರಿಕೆ ಜೆಟ್ಟಿಯನ್ನು ರೂ. 150.00 ಲಕ್ಷ ವೆಚ್ಚದಲ್ಲಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಸ್ತೆ ದುರಸ್ತಿ

267 (9) ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ):– ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುರುವೇಕೆರೆ ವಿಧಾನ ಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದಿಡಗ, ಹಲಬೂರು, ಮಾಯಸಂದ್ರ, ಮಾವಿನ ಕೆರೆ ನಾಗಮಂಗಲ ಗಡಿಯಿಂದ ದಬ್ಬೇಘಟ್ಟ, ಗುಬ್ಬಿ ಗಡಿಯಿಂದ ಶೀಗೇಹಳ್ಳಿ ಟಿ. ಬಿ. ಕ್ರಾಸ್ ಹಾಗೂ ಮಣಿಕೊಪ್ಪ ಗೇಟ್‌ನಿಂದ ಕಲ್ಲೂರು ಕ್ರಾಸ್, ಕೆ. ಕಲ್ಲಹಳ್ಳಿಯಿಂದ ಕೋಡಿ ಹಳ್ಳಿ ಕುನ್ನೂರುವರೆಗೆ ವರುಣನ ಗುಡಿಯಿಂದ ಗೆದ್ದೆಹಳ್ಳಿ ಮುಖಾಂತರ ಸೇರುವ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹದಗೆಟ್ಟಿರುವ ಈ ರಸ್ತೆಗಳನ್ನು ದುರಸ್ತಿ ಹಾಗೂ ಮರು ಡಾಂಬರೀಕರಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ತುರುವೇಕೆರೆ ವಿಧಾನ ಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದಿಡಗ ಹಲಬೂರು, ಮಾಯಸಂದ್ರ, ಮಾವಿನಕೆರೆ ರಸ್ತೆ ನಾಗಮಂಗಳ ಗಡಿಯಿಂದ ದಬ್ಬೇಘಟ್ಟ, ಗುಬ್ಬಿ, ಗಡಿಯಿಂದ ಶೀಗೇಹಳ್ಳಿ ಟಿ.ಬಿ. ಕ್ರಾಸ್ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಗಳಾಗಿದ್ದು ತಾಲ್ಲೂಕು ಕೇಂದ್ರಗಳನ್ನು ಸಂಪರ್ಕಿಸುವ ಮುಖ್ಯ ರಸ್ತೆಗಳಾಗಿರುತ್ತವೆ ಹಾಗೂ ಮಣಿಕುಪ್ಪೆ ಗೇಟ್ ನಿಂದ ಕಲ್ಲೂರು ಕ್ರಾಸ್, ಕೆ. ಕಲ್ಲಹಳ್ಳಿಯಿಂದ ಕೋಡಿಹಳ್ಳಿ ವರುಣನ ಗುಡಿಯಿಂದ ಗೆದ್ದೆಹಳ್ಳಿ ಮುಖಾಂತರ ಸೇರುವ ರಸ್ತೆಗಳು ಒಟ್ಟಾರೆ 83.32 ಕಿ.ಮೀ. ಉದ್ದ ಇರುತ್ತವೆ.

ಸದರಿ ರಸ್ತೆಗಳು ಅತಿಯಾದ ವಾಹನ ಸಂಚಾರ ಹಾಗೂ ಮಳೆಯಿಂದಾಗಿ ಬಹಳ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಗಳನ್ನು 2011–12ನೇ ಸಾಲಿನ ವಾರ್ಷಿಕ ನಿರ್ವಹಣೆಯಡಿ 3054:13ನೇ ಹಣಕಾಸು ಯೋಜನೆಯಡಿಯಲ್ಲಿ ರೂ. 39.50 ಲಕ್ಷಗಳ ಅನುದಾನ ನೀಡಿ, ಗುಂಡಿ ಮುಚ್ಚುವ ಕಾರ್ಯಕ್ರಮದಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಸದರಿ ಕಾಮಗಾರಿಗಳಲ್ಲಿ, ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿವಾರು ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ವಿಧಾನಸಭಾ ಸದಸ್ಯರಾದ ಶ್ರೀ. ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ರವರು ಮಂಡಿಸಿರುವ ಪ್ರಶ್ನೆ ಸಂಖ್ಯೆ: 9 ಕ್ಕೆ

ಅನುಬಂಧ-1

ಕ್ರಮ ಸಂಖ್ಯೆ	ರಸ್ತೆಯ ಹೆಸರು	ರಸ್ತೆಯ ಉದ್ದ ಕಿಮೀ	ಲೆಕ್ಕ ಶೀರ್ಷಿಕೆ	ದುರಸ್ತಿಗಾಗಿ ಮಂಜೂರಾದ ಅನುದಾನ ರೂ ಲಕ್ಷಗಳಲ್ಲಿ	ಮರು ಡಾಂಬರೀಕರಣಕ್ಕೆ ಮಂಜೂರಾದ ಅನುದಾನ ರೂ ಲಕ್ಷಗಳಲ್ಲಿ	ಪ್ರಗತಿ
1	2	3	4	5	6	7
1	ದಿಡುಗ ಅಲ್ಲೂರು ರಸ್ತೆ (ಹಿರಿಸಾವೆ ನೊಣವಿನಕೆರೆ ರಸ್ತೆ)	11.00	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	15.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಲಾಗಿದ್ದು, ಮಾನ್ಯ ಶಾಸಕರ ಸೂಚನೆಯಂತೆ ಗುಂಡಿ ಮುಚ್ಚಲು ಸಾಧ್ಯವಿಲ್ಲದೇ ಸಂಪೂರ್ಣ ಹಾಳಾಗಿರುವ ರಸ್ತೆಯ ಸರಹಳಿಗಳಲ್ಲಿ ರಸ್ತೆಯನ್ನು ಕೆರೆದು ಸಮತಟ್ಟುಗೊಳಿಸಿ ಮಣ್ಣು ಏರಿ ನಿರ್ಮಿಸಿ ವಾಹನ ಸಂಚಾರ ಯೋಗ್ಯಗೊಳಿಸಿದೆ.
2	ಮಾಯಾಸಂದ್ರ ಮಾವಿನಕರೆ ರಸ್ತೆ (ಮಾವಿನಕೆರೆ ವರಾಹಸಂದ್ರ ರಸ್ತೆ ವಯಾ ಮಾಯಸಂದ್ರ ಕಿಮೀ 0.00 ಯಿಂದ 7.00 ಕಿಮೀ)	7.00	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	4.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
3	ನಾಗಮಂಗಲ ಗಡಿಯಿಂದ ದಬ್ಬೇಘಟ್ಟ ಸೇರುವ ರಸ್ತೆ (ಬೋಚನಳ್ಳಿ ತುರುವೇಕೆರೆ ದಬ್ಬೇಘಟ್ಟ ರಸ್ತೆ) ಕಿಮೀ ೩.೦.೦೦ ರಿಂದ ೩೫.೮೦ ಕಿಮೀ	5.80	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	5.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
4	ಗುಬ್ಬಿ ಗ್ರಾಮಾಯಿಂದ ಸೀಗೇಹಳ್ಳಿ ಟಿ.ಬಿ. ಕ್ರಾಸ್ ಗೆ ಸೇರುವ ರಸ್ತೆ (ಸೊರವನಹಳ್ಳಿ ಸೀಗೆಹಳ್ಳಿ ರಸ್ತೆ ಕಿಮೀ 0.00 ಯಿಂದ 16.80 ಕಿಮೀ)	16.80	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	5.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು	40.60		29.00		

	ಗುಬ್ಬಿ ತಾಲ್ಲೂಕು					
1	ಹಬ್ಬೂರು ಕಲ್ಲೂರು ರಸ್ತೆಯ ಕಿಮೀ 6.40 ರಿಂದ 12.00 ಕಿಮೀ	5.60	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	2.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
2	ಹಬ್ಬೂರು ಕಲ್ಲೂರು ರಸ್ತೆಯ ಕಿಮೀ 12.10 ರಿಂದ 17.40 ಕಿಮೀ	5.30	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	1.50	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
3	ಹಬ್ಬೂರು ಕಲ್ಲೂರು ರಸ್ತೆಯ ಕಿಮೀ 23.00 ರಿಂದ 27.52 ಕಿಮೀ	4.52	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	2.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
4	ಸಿರಾ ನಂಜನಗೂಡು (ರಾಹೆ-ಉಳ) ರಿಂದ ಕೆ.ಜಿ. ಟೆಂಟಲ್ ವೀರಣ್ಣನ ಗಡಿ ಗುಡ್ಡೇಹಳ್ಳಿ ಹಂಕಲಕೊಪ್ಪ ಕೋಡಿಹಳ್ಳಿ ಮೂಲಕ ಸಿ.ಎಸ್.ಪುರ ಕೊಪ್ಪ ರಸ್ತೆ ಸೇರುವ ರಸ್ತೆಯ ಕಿಮೀ 0.00 ಯಿಂದ 6.00 ಕಿಮೀ ವರೆಗೆ ನಿರ್ವಹಣೆ ಕಾಮಗಾರಿ	6.00	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	1.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
5	ಸಿರಾ ನಂಜನಗೂಡು (ರಾಹೆ-ಉಳ) ರಿಂದ ಕೆ.ಜಿ. ಟೆಂಟಲ್ ವೀರಣ್ಣನ ಗಡಿ ಗುಡ್ಡೇಹಳ್ಳಿ ಹಂಕಲಕೊಪ್ಪ ಕೋಡಿಹಳ್ಳಿ ಮೂಲಕ ಸಿ.ಎಸ್.ಪುರ ಕೊಪ್ಪ ರಸ್ತೆ ಸೇರುವ ರಸ್ತೆಯ ಕಿಮೀ 6.10 ಯಿಂದ 11.80 ಕಿಮೀ ವರೆಗೆ ನಿರ್ವಹಣೆ ಕಾಮಗಾರಿ	5.70	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	1.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
6	ಎಡೆಯೂರು ಕಲ್ಲೂರು ರಸ್ತೆಯಿಂದ ಕಿಂಕಲ್ಲಹಳ್ಳಿ ಬೇಲೂರು ಗೊರಹಟ್ಟಿ ಕೋಡಿಹಳ್ಳಿ ಕುನ್ನಾಲ ಕೊರಮಾದೇಹಳ್ಳಿ ಮೂಲಕ ಸಿರಾ ನಂಜನಗೂಡು ರಾಹೆ-ಉಳ ನ್ನು ಸೇರುವ ರಸ್ತೆಯ ಕಿಮೀ 0.00 ಯಿಂದ 7.00 ಕಿಮೀ ವರೆಗೆ ನಿರ್ವಹಣೆ ಕಾಮಗಾರಿ	7.00	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	1.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
7	ಎಡೆಯೂರು ಕಲ್ಲೂರು ರಸ್ತೆಯಿಂದ ಕಿಂಕಲ್ಲಹಳ್ಳಿ ಬೇಲೂರು ಗೊರಹಟ್ಟಿ ಕೋಡಿಹಳ್ಳಿ ಕುನ್ನಾಲ ಕೊರಮಾದೇಹಳ್ಳಿ ಮೂಲಕ ಸಿರಾ ನಂಜನಗೂಡು ರಾಹೆ-ಉಳ ನ್ನು ಸೇರುವ ರಸ್ತೆಯ ಕಿಮೀ 7.10 ಯಿಂದ 15.70 ಕಿಮೀ ವರೆಗೆ ನಿರ್ವಹಣೆ ಕಾಮಗಾರಿ	8.60	13 ನೇ ಹಣಕಾಸು ವಾರ್ಷಿಕ ನಿರ್ವಹಣೆ	2.00	ಇಲ್ಲ	ವಾರ್ಷಿಕ ನಿರ್ವಹಣೆ ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು	42.72		10.50		